6. ನಿಲುವಳಿ ಸೂಚನೆ ಮಂಡಿಸಲು ಅವಕಾಶ ಕೋರಿಕೆ

ವಿಷಯ : ಕಬ್ಬು ಬೆಳೆಗೆ ಸರ್ಕಾರ ನಿಗದಿ ಪಡಿಸಿರುವ ಹಣವನ್ನು ನೀಡುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಇಂದು ನಾವು ತಂದಿರುವ ನಿಲುವಳಿ ಸೂಚನೆಯ ಬಗ್ಗೆ ಶ್ರೀ ಗೋವಿಂದ ಕಾರಜೋಳ ರವರು ಮಾತನಾಡುತ್ತಾರೆ. ಬೆಳಗಾವಿಯಲ್ಲಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಕಬ್ಬು ಬೆಳೆಗಾರರು ಹೋರಾಟ ನಡೆಸಿದ ಸಂದರ್ಭದಲ್ಲಿ ನಾವುಗಳು ನಿಲುವಳಿ ಸೂಚನೆಯ ಮುಖಾಂತರ ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದವು. ಅದರ ಬಗ್ಗೆ ಅಂದು ಸರ್ಕಾರ ಯಾವ ರೀತಿಯ ಸ್ಪಂದಿಸಬೇಕಿತ್ತು. ಆ ರೀತಿ ಸ್ಪಂದಿಸಿದ್ದರೆ ರೈತ ಆತ್ಮಹತ್ಯೆ ಮಾಡಿಕೊಂಡಂತಹ ಘಟನೆ ಬಹುಶಃ ನಡೆಯುತ್ತಿರಲಿಲ್ಲ. ಅಂದೂ ಕೂಡಾ ನಾವು ಸಾಕಷ್ಟು ಒತ್ತಾಯ ಮಾಡಿದೆವು. ನಾವು ಚರ್ಚೆ ಮಾಡುವಾಗ ಈಗಾಗಲೇ ₹2,500/– ದರ ನಿಗದಿ ಮಾಡಿದ್ದು, ಸರ್ಕಾರದಿಂದ ₹150/– Incentive ಕೊಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದರು. ಧರಣಿ ಸತ್ಯಾಗ್ರಹ ನಡೆಯುವ ಸಂದರ್ಭದಲ್ಲಿ ಅವರು ಮುಖ್ಯಮಂತ್ರಿಗಳ ಬಳಿ request ಮಾಡಿದ್ದರು. & ಮುಖ್ಯಮಂತ್ರಿಗಳು ಸರ್ಕಾರ ಏನು ರೂ. 2,500/– ದರ ನಿಗದಿ ಮಾಡಿದೆ, ಅದನ್ನು Factory ಮಾಲೀಕರಿಂದ ವಸೂಲಿ ಮಾಡಿ ರೈತರಿಗೆ ಕೊಡಿಸುವ ಜವಾಬ್ದಾರಿ ನಮ್ಮದು. ಒಂದು ವೇಳೆ ಕಾರ್ಖಾನೆಗಳ ಮಾಲೀಕರುಗಳು ಹಣ ಕೊಡದಿದ್ದರೆ ಅವರ ಮೇಲೆ ಕಟ್ಟುನಿಟ್ಟಾಗಿ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದರು. ಅಂದೂ ಕೂಡಾ ನಾವು ಸಂಶಯ ವ್ಯಕ್ತಪಡಿಸಿ ಹೇಳಿದ್ದೆವು. ಸರ್ಕಾರ ಇದನ್ನು ಮಾಡುವುದಿಲ್ಲ. ಏಕೆಂದರೆ ಕಾರ್ಖಾನೆಗಳ ಮಾಲೀಕರು ಮಂತ್ರಿಗಳಿದ್ದಾರೆ. ಸರ್ಕಾರ ನಿಗದಿ ಮಾಡಿದ ದರವನ್ನು ಅವರೇ ಕೊಡಲು ತಯಾರಿಲ್ಲ ಎಂಬ ಮಾತನ್ನು ನಾವು ಅಂದು ಹೇಳಿದ್ದೆವು.

ಶ್ರೀ ಟಿ.ಬಿ.ಜಯಚಂದ್ರ : ಇದು ಯಾವ ನಿಯಮದಡಿಯಲ್ಲಿ ಚರ್ಚೆ ಯಾಗುತ್ತಿದೆ?

ಅಧ್ಯಕ್ಷರು : ಅವರು Adjournment Motion ಕೊಟ್ಟಿದ್ದಾರೆ. ಈಗ ನಾನು ಅದನ್ನು ನಿಯಮ 69 ರಡಿಯಲ್ಲಿ ತೆಗೆದುಕೊಂಡು ನಾಳೆ ದೀರ್ಘ ಚರ್ಚೆಗೆ ಹಾಕೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈಗಲೇ ತೆಗೆದುಕೊಳ್ಳಿ.

ಅಧ್ಯಕ್ಷರು: ಬೇಡ.

ಶ್ರೀ ಜಗದೀಶ್ ಶೆಟ್ಟರ್: ಇನ್ನೊಂದು ಏನಾಗಿದೆ ಎಂದರೆ ಪ್ರತಿಭಟನಾ ರೈತರನ್ನು ಬಂದಿಸಿ ಜೈಲಿಗೆ ಕಳುಹಿಸಿದ್ದಾರೆ. ಇದು ಯಾವ ನ್ಯಾಯ? ರೈತರ ಬೇಡಿಕೆಯೆಂದರೆ, ನೀವು ಬೆಳಗಾವಿ ಅಧಿವೇಶನ ನಡೆಯುವ ವೇಳೆ ನೀವು ಏನು ಅವರಿಗೆ ಭರವಸೆ ನೀಡಿ ಬಂದಿದ್ದಿರಿ, ಆ ಪ್ರಕಾರ ಸರ್ಕಾರ ನಡೆಯಲಿಲ್ಲ. ಆ ಕುರಿತು ಹೋರಾಟ ಮಾಡಲು ಬಂದವರನ್ನು ನೀವು arrest ಮಾಡಿ ಜೈಲಿಗೆ ಕಳುಹಿಸಿದ್ದೀರಿ. ಇದು ಯಾವ ನ್ಯಾಯ? ಅವರನ್ನು ಕರೆದು ಮಾತುಕತೆ ಮಾಡಿ, ಒಂದು ಬಾರಿ ಮಾತುಕತೆ ಮಾಡಿರುವುದಾಗಿ ಹೇಳಿದಿರಿ, ಇಂದು 28ನೇ ತಾರೀಖು ಕಾರ್ಖಾನೆಯ ಮಾಲೀಕರನ್ನು ಕರೆಯುವುದಾಗಿ ಹೇಳಿದ್ದಿರಿ. ಇದರ ಬಗ್ಗೆ ಏನಾದರೂ ಸರ್ಕಾರ ಸ್ಪಷ್ಟನೆ ಮಾಡಬೇಕು. ಬಂಧಿಸಲ್ಪಟ್ಟ ರೈತರನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

ಅಧ್ಯಕ್ಷರು: ಆಯಿತು. ಇದನ್ನು ನಾಳೆ ತೆಗೆದುಕೊಳ್ಳೋಣ,

ಶ್ರೀ ಗೋವಿಂದ ಎಂ,ಕಾರಜೋಳ : ಪ್ರತಿಭಟನಾ ನಿರತ ರೈತರನ್ನು ಜೈಲಿನಲ್ಲಿಟ್ಟು ಸಭೆ ನಡೆಸುವುದು ಸರ್ಕಾರಕ್ಕೆ ಶೋಭೆ ತರುವ ವಿಚಾರವಲ್ಲ.

ಶ್ರೀ ಪಿಳ್ಳಮುನಿಶಾಮಪ್ಪ : ಮಾನ್ಯ ಅಧ್ಯಕ್ಷರೆ, ದೇವನಹಳ್ಳಿಯಲ್ಲಿ ಬಂದ್ ನಡೆಸುತ್ತಿದ್ದು, ಅಲ್ಲಿ ಏನಾದರೂ ವ್ಯತ್ಯಾಸವಾದರೆ ಸರ್ಕಾರವೇ ಹೊಣೆ ಯಾಗುತ್ತದೆ. ನನಗೆ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಿನ್ನೆ ಸಂಜೆ 07.30–08.00 ಗಂಟೆಯ ಸುಮಾರಿಗೆ ರೈತ ಪ್ರತಿನಿದಿಗಳು ಬಂದು ನಮ್ಮೊಡನೆ ಚರ್ಚಿಸಿದ್ದು, ಏನೇನು ಮಾತುಕತೆ ಆಗಿದೆ ಎಂಬ ವಿವರಣೆಯನ್ನು ನಾನು ಅವರಿಗೆ ನೀಡಿದ್ದೇನೆ. ಇಂದು ಮಧ್ಯಾಹ್ನ 03.00 ಗಂಟೆಗೆ ಸಕ್ಕರೆ ಕಾರ್ಖಾನೆಯ ಮಾಲೀಕರುಗಳ ಸಭೆ ಕರೆದಿದ್ದೇನೆ, ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಂಘದವರು ಹೈಕೋರ್ಟಿಗೆ ಹೋಗಿದ್ದಾರೆ. ಸಕ್ಕರೆ ಕಾರ್ಖಾನೆಯ ಮಾಲೀಕರುಗಳ ಸಭೆ ಕರೆದು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿ ಎಂದು ಹೈಕೋರ್ಟಿನಲ್ಲಿ ಹೇಳಿದ್ದಾರೆ. ಈಗಾಗಲೇ ಒಂದು ಸಭೆ ಮಾಡಿದ್ದು, ಅವರು ಒಪ್ಪಲಿಲ್ಲ. ಇನ್ನೊಂದು ಸಭೆಯನ್ನು ಇಂದು ಕರೆದಿದ್ದು, ಅವರಿಗೆ ಬಹಳ ಸ್ಪಷ್ಟವಾಗಿ ಸರ್ಕಾರದ ತೀರ್ಮಾನದಂತೆ ರೈತರಿಗೆ ದರ ಕೊಡಬೇಕೆಂದು ಹೇಳುತ್ತೇವೆ. ಆದೂ ಆಗದಿದ್ದರೆ ಕೋರ್ಟಿನ ಬಳಿ ಹೋಗಬೇಕಾಗುತ್ತದೆ. ಇಂದಿನ ಸಭೆಯಲ್ಲಿ ಏನಾಗುತ್ತದೆಂದು ನೋಡೋಣ.

ಜಗದೀಶ್ ಶೆಟ್ಟರ್ : ನಾನು ನಿಯಮ 60 ರ ಪ್ರಕಾರ ಕೊಟ್ಟಿದ್ದೇನೆ, ಇಂದು ಸಭೆ ನಡೆದ ನಂತರ ಏನಾಗುತ್ತದೆಂದು ನೋಡಿ ನಾಳೆಗೆ ಚರ್ಚೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ಆಯಿತು. ಈಗ ವಿಧೇಯಕಗಳ ಮಂಡನೆ.

ಶ್ರೀ ಪಿಳ್ಳ. ಮುನಿಶಾಮಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿಸಬೇಕು.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ದೇವನಹಳ್ಳಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಬಂದ್ ಮಾಡುತ್ತಿದ್ದಾರಂತೆ, ಅವರು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಬಯಸುತ್ತಿದ್ದಾರೆ. ದಯಮಾಡಿ ಅವರಿಗೆ ಅವಕಾಶ ಕೊಡಿ,

(ಗೊಂದಲ)

ಅಧ್ಯಕ್ಷರು: ನಾಳೆ, ಈಗ ವಿಧೇಯಕಗಳ ಮಂಡನೆ.

7. ಶಾಸನ ರಚನೆ 1 ಮಂಡನೆಗೆ ಅನುಮತಿ ಕೋರಿಕೆ

1) ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ(ತಿದ್ದುಪಡಿ), ವಿಧೇಯಕ, 2014

ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಹಾಗೂ ಪಶು ಸಂಗೋಪನೆ ಸಚಿವರು): ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ)ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಮಂಡಿಸಲಾಯುತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

2014ನೇ ಸಾಲಿನ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ(ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.